4. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2014

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ,. . .

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಈ ವಿಧೇಯಕವು ತುರ್ತು ಇರುವುದು ಏನೂ ಇಲ್ಲ. ಉನ್ನತ ಶಿಕ್ಷಣ ಸಚಿವರು ಬರಲಿ. ಆಗ ಚರ್ಚೆಯಾಗಲಿ. ತುರ್ತು ಇಲ್ಲ.

(ಗೊಂದಲ)

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸುವುದು ಅಷ್ಟೇ. ಮಂಡಿಸಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಾರ್ ಇದು ಮಂಡಿಸುವುದಲ್ಲ. ಮಂಡಿಸಿರುವುದು ಆಗಿದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಇದು ಚರ್ಚೆ ಮಾಡುವುದಕ್ಕೆ ಬಿಲ್ ಅಲ್ಲ. ಈ ಸದನದಲ್ಲಿ ಇದು ಪಾಸ್ ಆಗಿ ಕೌನ್ಸಿಲ್‌ಗೆ ಹೋಗಬೇಕಾಗಿದೆ, ಆದ್ದರಿಂದ ನಾನು ಹೇಳುವುದು ಅನಿವಾರ್ಯವಾಗುತ್ತದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇದೊಂದು ಬಿಲ್. ಮಾನ್ಯ ಜಯಚಂದ್ರರವರೆ ದಯವಿಟ್ಟು ಇದು ತುರ್ತು ಏನಿದೆ? ತುರ್ತು ಏನಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಉನ್ನತ ಶಿಕ್ಷಣ ಸಚಿವರು ಬರಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತುರ್ತು ಪ್ರಶ್ನೆ ಅಲ್ಲ.

(ಗೊಂದಲ)

ಅಧ್ಯಕ್ಷರು:– ಇದರಲ್ಲಿ ಒಂದು ಸಣ್ಣ ವಿಷಯ ಇದೆ ಅಷ್ಟೆ.

ಶ್ರೀ ವೈ.ಎಸ್.ವಿ ದತ್ತಾ:– ಮಾನ್ಯ ಅಧ್ಯಕ್ಷರೆ ಸಣ್ಣ ವಿಷಯ ಅಲ್ಲ. ತುರ್ತು ಇದೆಯಾ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ನಾವೇನಾದರೂ ಸ್ಪಷ್ಟೀಕರಣ ಕೇಳಿದರೆ ಅವರು ಕಾನೂನು ಸಚಿವರು ಹೇಳಬಹುದು. ಆದರೆ ಉನ್ನತ ಶಿಕ್ಷಣ ಸಚಿವರೆ ಇದ್ದರೆ ಅರ್ಥಪೂರ್ಣವಾದ ಚರ್ಚೆಯಾಗುತ್ತದೆ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಇದು ಶೂನ್ಯವೇಳೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಉನ್ನತ ಶಿಕ್ಷಣ ಸಚಿವರು ಬರಲಿ. ಇದರಲ್ಲಿ ತಲೆ ಹೋಗುವಂತಹ ಪರಿಸ್ಥಿತಿ ಏನೂ ಇಲ್ಲ. ಅವರು ಬಂದ ಮೇಲೆ ತೆಗೆದುಕೊಳ್ಳಿ. ಮಾನ್ಯ ಕಾನೂನು ಸಚಿವರೆ ತಲೆ ಏನೂ ಹೋಗುವುದಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಬಂದ ಮೇಲೆಯೇ ಮಾಡಿಸಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ರವಿಯವರೆ, ದತ್ತಾರವರೆ ತಾವು ಹೇಳುವುದರಲ್ಲಿ ಸತ್ಯವಿದೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಮಸೂದೆಯಲ್ಲಿ ಅತ್ಯಂತ

ಸೀಮಿತವಾದಂತಹ ಪ್ರಶ್ನೆ ಇದೆ. ಅಂದರೆ University ಯ jurisdiction ಅನ್ನು ವಿಸ್ತಾರ ಮಾಡುವುದಕ್ಕೆ ಅಷ್ಟೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಈ ರೀತಿ ನಾವು relaxation ಕೊಟ್ಟರೆ ಬಹುಶಃ ಮಾನ್ಯ ಜಯಚಂದ್ರರವರೆ ನಾಳೆಯಿಂದ ಎಲ್ಲರ ಪರವಾಗಿ ಉತ್ತರ ಕೊಡಬೇಕಾಗುತ್ತದೆ. ಸಂಬಂಧಪಟ್ಟ ಸಚಿವರುಗಳೆ ಬರುವುದಿಲ್ಲ. ಮಾನ್ಯ ಜಯಚಂದ್ರರವರೆ ತಾವೇ ನೋಡಿಕೊಳ್ಳಿ ಎಂದು ಬಿಡುತ್ತಾರೆ ಆ ಪರಿಸ್ಥಿತಿ ಆಗುತ್ತದೆ.

(ಗೊಂದಲ)

ಅಧ್ಯಕ್ಷರು:– ಇಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಅವರವರ ಮಸೂದೆಗಳನ್ನು ಮಂಡಿಸಬೇಕಾದರೆ ಮಂತ್ರಿಗಳು ಇರಬೇಕು. ಚರ್ಚೆಯಲ್ಲಿ ಭಾಗವಹಿಸಲೇಬೇಕು. ಸಾಧಕ–ಬಾಧಕಗಳನ್ನು ಗಮನಿಸಬೇಕು. ಆಯಿತು ಇದೊಂದು ಸನ್ನಿವೇಶ ಹೇಳಲಿ ಬಿಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಸದಸ್ಯರುಗಳಿಗೆ ವಿಧೇಯಕದ ಕಾಪಿಗಳನ್ನು ಕೊಟ್ಟಿದೆ. ನೀವೇ ನೋಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾಳೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ ಜಯಚಂದ್ರ:– ಅದನ್ನು ಮುಂದೆ ಹಾಕಿಸುವುದರಲ್ಲಿ ಏನರ್ಥವಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿ ಪಾಸ್ ಆಗಿ ಕೌನ್ಸಿಲ್‌ಗೆ ಹೋಗಬೇಕಾಗಿದೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇನ್ನೂ ಮುಂದಿನ ವಾರ ಪೂರ್ಣ ಇದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಅಷ್ಟರೊಳಗೆ ಕೌನ್ಸಿಲ್‌ಗೆ ಹೋಗಬೇಕು.

(ಗೊಂದಲ)

ಶ್ರೀ ಸಿ.ಟಿ. ರವಿ:– ಆಯಿತು ಈಗ ಈ ಸದನದಲ್ಲಿ ಪಾಸ್ ಆಗಲಿಲ್ಲವೆಂದು ಇಟ್ಟುಕೊಳ್ಳಿ, ಗಂಟು ಏನು ಹೋಗುತ್ತದೆ?

(ಗೊಂದಲ)

ಅಧ್ಯಕ್ಷರು:– ಈಗ ನಮ್ಮ ಮುಂದೆ ಬಹಳ ಮುಖ್ಯವಾದ ವಿಷಯಗಳು ಇವೆ. ಈಗ ಸಣ್ಣ ಸಣ್ಣ ವಿಷಯಗಳಿಗೆ ತಲೆ ಕೆಡಿಸಿಕೊಳ್ಳುವುದು ಬೇಡ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಅದಕ್ಕೆ ಇದನ್ನು ನಾಳೆ ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಜಯಚಂದ್ರರವರೆ, ಇದು ಸರಿಯಲ್ಲ. ನೀವು ಕಾಗದ ಪತ್ರಗಳನ್ನು ಮಂಡಿಸಿದ್ದೀರಿ. ಹೋಗಲಿ ಕಾಗದ ಪತ್ರಗಳನ್ನು ಮಂಡಿಸಿರುವುದು ಸರಿಯಿದೆ. ಮಾನ್ಯ ಅಧ್ಯಕ್ಷರೆ ಇದೊಂದು ಕಾಯ್ದೆ. ಕಾಯ್ದೆ ಇರುವಾಗಲೂ ಸಚಿವರು ಇದ್ದಾಗ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ? ಆಯಿತು ಇವತ್ತು ಏನೋ ತುರ್ತು ಇರಬಹುದು ಅವರು ಇವತ್ತು ತಮ್ಮ ಹತ್ತಿರ ಅನುಮತಿ ಕೇಳಿರಬಹುದು, ಹೋಗಿರಬಹುದು. ನೀವು ನಾಳೆ ತೆಗೆದುಕೊಳ್ಳಿ. ಏನು ಹೋಗುವುದು ಇದೆ? ಏನಾದರೂ ತುರ್ತು ಇದ್ದರೆ ಮಾಡಬಹುದು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಕಾನೂನು ಸಚಿವರೆ, ಸರ್ಕಾರ ಇರಬಹುದು, ನಿಮಗೆ ಅಧಿಕಾರ ಇಲ್ಲವೆಂದು ಹೇಳುತ್ತಿಲ್ಲ. ಸಂಬಂಧಪಟ್ಟ ಸಚಿವರು ಬರಬೇಕಲ್ಲವೇ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ. ಕಾಯ್ದೆ ಮಾಡುವುದು.

(ಗೊಂದಲ)

ಅಧ್ಯಕ್ಷರು:– ಈಗಾಗಲೇ ಈ ವಿಧೇಯಕವನ್ನು ಮಂಡಿಸಲಾಗಿದೆ. ಇದೊಂದು ಬಿಡೋಣ. ಮುಂದಿನ ವಿಚಾರದಲ್ಲಿ ಸಂಬಂಧಪಟ್ಟ ಸಚಿವರುಗಳೆ ಬರುವಂತಹ ರೀತಿಯಲ್ಲಿ ಮಾಡುತ್ತೇನೆ. ಇದೊಂದು ಸನ್ನಿವೇಶ.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್:– ಬೇಡ ಅಧ್ಯಕ್ಷರೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರಿಗೆ ಅಧಿಕಾರವಿದೆ ಮಾಡುತ್ತಾರೆ. ಆದರೆ ನಮ್ಮ ಕಳಕಳಿ ಏನೆಂದರೆ, ಅವರ ಆರೋಗ್ಯದ ಬಗ್ಗೆಯೂ ನಾವು ನೋಡಿಕೊಳ್ಳಬೇಕಾಗುತ್ತದೆ. ಎಲ್ಲಾ ಮಂತ್ರಿಗಳದ್ದೂ ಒಬ್ಬರೇ ಸಾಯುವುದು ಎಂದರೆ ಪಾಪ ಅವರ ಆರೋಗ್ಯದ ಗತಿ ಏನು?

(ಗೊಂದಲ)

ಅಧ್ಯಕ್ಷರು:– He is capable....

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಮಹಿಳಾ ವಿಶ್ವವಿದ್ಯಾಲಯದ್ದು ಏನೇನು ಆಗಿದೆ, ಏನೇನು ಹೋಗಿದೆ ಎಂದು ಇತಿಹಾಸ ಬಹಳ ದೊಡ್ಡದು ಇದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಎಲ್ಲವನ್ನೂ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಿಮ್ಮ ಹತ್ತಿರ ಅದರ ಬಗ್ಗೆ ಪೂರ್ಣ ಮಾಹಿತಿ ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಬರಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಬೇಕಾದರೆ ಮಧ್ಯಾಹ್ನದ ಮೇಲೆ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಆಯಿತು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು:– ಆಯಿತು. Agreed. Agreed. ಈಗ ಶೂನ್ಯವೇಳೆಯಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ಆಮೇಲೆ ತೆಗೆದುಕೊಳ್ಳೋಣವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈಗಲೇ ತೆಗೆದುಕೊಳ್ಳಿ.

ಅಧ್ಯಕ್ಷರು:– ಒಂದು ಮಾತು ಹೇಳುತ್ತೇನೆ. ಈಗ ನಾನು ಶೂನ್ಯ ವೇಳೆಯನ್ನು ತೆಗೆದುಕೊಳ್ಳುತ್ತೇನೆ. ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿಲ್ಲ. ದಯವಿಟ್ಟು ಚರ್ಚೆ ಮಾಡುವುದಕ್ಕೆ ಹೋಗಬೇಡಿ. ವಿಷಯವನ್ನು ಪ್ರಸ್ತಾಪ

ಮಾಡಬೇಕು. ಸಂಬಂಧಪಟ್ಟ ಸಚಿವರು ಇದ್ದರೆ ಉತ್ತರ ಹೇಳುತ್ತಾರೆ. ಯುವಕರು ಇದನ್ನು ದಯವಿಟ್ಟು ಗಮನಿಸಿ. ಆಯಿತು ಈಗ ಶೂನ್ಯ ವೇಳೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು.

1. ವಿಷಯ: ದಿನಗೂಲಿ ನೌಕರರ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಶೂನ್ಯ ವೇಳೆಯಲ್ಲಿ ದಿನಗೂಲಿ ನೌಕರರ ಬಗ್ಗೆ ಕೇಳಿದ್ದೆ. ಅದಕ್ಕೆ ಅವರಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು:– ಮಾನ್ಯ ಸಚಿವರೆ, ಕಡತ ತೆಗೆದು ನೋಡಿ. ಉತ್ತರ ಇದ್ದರೆ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ಜಗದೀಶ್‌ಶೆಟ್ಟರ್‌ರವರೆ ತಮ್ಮ ಪ್ರಶ್ನೆ ಕೇಳುವುದು.

2. ವಿಷಯ: ನೈಸ್‌ಗೆ ಸಂಬಂಧಿಸಿದಂತೆ ಪತ್ರಿಕೆಯಲ್ಲಿ ಬಂದಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, "ನಿನ್ನೆ ಕನ್ನಡ ಪ್ರಭ" ದಿನಪತ್ರಿಕೆಯಲ್ಲಿ ಸುದ್ದಿ ಬಂದಿದೆ ಏನೆಂದರೆ 'ನೈಸಾಗಿ ಬೆಂಕಿ ಬಿತ್ತು, ಅಧಿಕಾರಿಗಳಿಂದ ಅಕ್ರಮ ದಾಖಲೆ ನಾಶ' ಎಂದು. ಈ ನೈಸ್ ಬಗ್ಗೆ...

ಅಧ್ಯಕ್ಷರು:– ಅವೆಲ್ಲಾ ಬೇಡ.

ಶ್ರೀ ಜಗದೀಶ್ ಶೆಟ್ಟರ್:– ನೈಸ್ ಬಗ್ಗೆ ಸಮಗ್ರ ತನಿಖೆಗಾಗಿ ಒಂದು ಸದನ ಸಮಿತಿಯನ್ನು ತಾವು ಮಾಡಿದ್ದೀರಿ.

ಅಧ್ಯಕ್ಷರು:– ಹೌದು.

ಶ್ರೀ ಜಗದೀಶ್ ಶೆಟ್ಟರ್:– ಆ ಸಮಿತಿಗೆ ಮಾನ್ಯ ಜಯಚಂದ್ರರವರೆ ಅಧ್ಯಕ್ಷರಿದ್ದಾರೆ. ಅದರ ಬಗ್ಗೆ ಪ್ರಶ್ನೆ ಇಲ್ಲ. ಅದರ ಬಗ್ಗೆ discussion ಆಗಲಿ, file ತರಿಸಲಿ, ಅದರ ಬಗ್ಗೆ ಏನು ನಿರ್ಣಯ ಕೊಡುತ್ತಾರೆ ಕೊಡಲಿ. ಆದರೆ